ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

# 10, 3ನೇ ಮಹಡಿ, ಖಾದಿಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–52

ದೂರವಾಣಿ ಸಂಖ್ಯೆ:22250017/18, ಫ್ಯಾಕ್ಸ್ ಸಂಖ್ಯೆ:22250051

ಇ–ಮೇಲ್:mdkstdevp@yahoo.co.in / mdkmvstdc@gmail.com

Web : http://www.karnataka.gov.in/kmvstdcl/Pages/home.aspx


ದಿನಾಂಕ : 21–04–2017

ಜಿಲ್ಲೆ ವ್ಯವಸ್ಥಾಪಕರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ,
ಎಲ್ಲಾ 30 ಜಿಲ್ಲೆಗಳಿಗೆ.

ಮಾನ್ಯರೆ,

ವಿಷಯ: 2017–18ನೇ ಸಾಲಿನ ನಿಗಮದ ವಿವಿಧ ಯೋಜನೆಗಳಡಿ ಸೌಲಭ್ಯ ಕಲ್ಪಿಸಲು ಅರ್ಹ ಪರಿಶಿಷ್ಟ ಪಂಗಡದ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ದಿನಾಂಕ:24.04.2017 ರಿಂದ ಸ್ವೀಕರಿಸುವ ಬಗ್ಗೆ.

*****

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು, 2017–18ನೇ ಸಾಲಿಗೆ ಪರಿಶಿಷ್ಟ ಪಂಗಡದ ಜನರ ಆರ್ಥಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ದಿನಾಂಕ:24.04.2017 ರಿಂದ ಅಹ್ವಾನಿಸಲಾಗಿದೆ. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:31.05.2017 ಆಗಿರುತ್ತದೆ.

1. **ಸ್ವಯಂ ಉದ್ಯೋಗ ಕಾರ್ಯಕ್ರಮ (ರೂ.1.00 ಲಕ್ಷದೊಳಗಿನ ಘಟಕಗಳು) :–**
   - 1.1 (ಎ) ಸ್ವಯಂ ಉದ್ಯೋಗ ಯೋಜನೆ (ಹೈನುಗಾರಿಕೆ)
     (ಬಿ) ಸ್ವಯಂ ಉದ್ಯೋಗ ಯೋಜನೆ (ಇತರೆ ಉದ್ದೇಶಗಳು)
   - 1.2 ನೇರ ಸಾಲ ಯೋಜನೆ (ಹೈನುಗಾರಿಕೆ/ಕುರಿ/ಮೇಕೆ ಸಾಕಾಣಿಕೆ)
   - 1.3 ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ರೂ.1.00 ಲಕ್ಷ ಮೀರಿದ ಘಟಕಗಳು) :–
     (ಎ) ವೃತ್ತಿ ಕೌಶಲ್ಯ
     (ಬಿ) ಟೂರಿಸ್ಟ್ ಟ್ಯಾಕ್ಸಿ
     (ಸಿ) ಇತರೆ ಉದ್ದೇಶಗಳು
   - 1.4 ಭೂ ಒಡೆತನ ಯೋಜನೆ:–
2. ಮೈಕ್ರೋ ಕ್ರೆಡಿಟ್ (ಕಿರುಸಾಲ)ಯೋಜನೆ.
3. ಗಂಗಾ ಕಲ್ಯಾಣ ಯೋಜನೆ:–
   - 3.1 ವೈಯಕ್ತಿಕ ನೀರಾವರಿ ಕೊಳವೆಬಾವಿ/ತೆರೆದ ಬಾವಿ ಯೋಜನೆ,
   - 3.2 ಏತ ನೀರಾವರಿ ಯೋಜನೆ.

**ನಿಗಮದಿಂದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು**

1. ಅರ್ಜಿದಾರರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು ಹಾಗೂ ಕಳೆದ ಕನಿಷ್ಟ 15 ವರ್ಷಗಳಿಂದ ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ಅರ್ಜಿದಾರರು 18 ವರ್ಷದಿಂದ 60 ವರ್ಷದೊಳಗಿನ ವಯೋಮಾನದವರಾಗಿರಬೇಕು.
3. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶವಾದಲ್ಲಿ ರೂ.1,50,000/– ಹಾಗೂ ನಗರ ಪ್ರದೇಶವಾದಲ್ಲಿ ರೂ.2,00,000/– ಮಿತಿಯೊಳಗಿರಬೇಕು.
4. ಅರ್ಜಿದಾರರ ಕುಟಂಬದ ಯಾವುದೇ ಸದಸ್ಯರು ಸರ್ಕಾರಿ / ಅರೆ ಸರ್ಕಾರ ಸಂಸ್ಥೆಯಲ್ಲಿ ನೌಕರಿಯಲ್ಲಿರಬಾರದು.
5. ಅರ್ಜಿದಾರರು ಅಥವಾ ಅವರ ಕುಟುಂಬದವರು ಈ ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು.
6. ಜಿಲ್ಲೆಯಲ್ಲಿ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಈಗಾಗಲೇ ನೊಂದಣಿ ಮಾಡಿಕೊಂಡಿರುವ ಪರಿಶಿಷ್ಟ ಪಂಗಡದ ಅಂಗವಿಕಲ ಫಲಾನುಭವಿಗಳ ಲಭ್ಯವಿರುವ ಪಟ್ಟಿಯಿಂದ ಅಂಗವಿಕಲರನ್ನು ನೇರವಾಗಿ ಸಂದರ್ಶನ ಮಾಡಿ ಸೌಲಭ್ಯ ಕಲ್ಪಿಸಲಾಗುವುದು.
7. ವಾಹನಗಳಿಗೆ ಸೌಲಭ್ಯ ಪಡೆಯಲು ಫಲಾಪೇಕ್ಷಿಗಳು ಡ್ರೈವಿಂಗ್ ಲೈಸೆನ್ಸ್‌ನೊಂದಿಗೆ ಬ್ಯಾಡ್ಜ್ ಅನ್ನೂ ಹೊಂದಿರಬೇಕು.
8. ಸ್ವಯಂ ಉದ್ಯೋಗ ಯೋಜನೆಯಡಿ ಸಣ್ಣ ಉದ್ದಿಮೆ (ಕ್ರಮ ಸಂಖ್ಯೆ: (1.3 (ಎ)) ಪ್ರಾರಂಭಿಸಲು ಸೌಲಭ್ಯ ಬಯಸುವ ಅರ್ಜಿದಾರರು ಕನಿಷ್ಠ ಡಿಪ್ಲೋಮ/ಐ.ಟಿ.ಐ ಪ್ರಮಾಣ ಪತ್ರ ಹೊಂದಿರಬೇಕು.
9. ಭೂ ಒಡೆತನ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾಪೇಕ್ಷಿಯು ಪರಿಶಿಷ್ಟ ಪಂಗಡದ ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಾಗಿರಬೇಕು.

10. ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾಪೇಕ್ಷಿಯು ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು.
11. ಜಮೀನು ಮಾರಾಟ ಮಾಡುವ ಭೂ ಮಾಲೀಕರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರಬಾರದು.

***ಫಲಾಪೇಕ್ಷಿಯು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು***

1. ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರ
2. ಜಾತಿ ಪ್ರಮಾಣ ಪತ್ರ
3. ಕುಟುಂಬದ ವಾರ್ಷಿಕ ವರಮಾನ ಪತ್ರ
4. ಪಡಿತರ ಚೀಟಿ / ಆಧಾರ್ ಕಾರ್ಡ್
5. ಅರ್ಜಿದಾರರು ಹೊಂದಿರುವ ಬ್ಯಾಂಕ್ ಉಳಿತಾಯ ಖಾತೆಯ ವಿವರಗಳನ್ನೊಳಗೊಂಡ ಪಾಸ್ ಬುಕ್‌ನ ಮೊದಲ ಪುಟದ ಪ್ರತಿ.
6. ಯೋಜನಾ ವರದಿ / ದರಪಟ್ಟಿ (ಅನ್ವಯವಾಗು ಘಟಕಗಳಿಗೆ)
7. ವಾಹನವಾಗಿದ್ದಲ್ಲಿ, ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಪಡೆದ ವಾಹನ ಚಾಲನ ಪರವಾನಗಿ ಮತ್ತು ಬ್ಯಾಡ್ಜ್‌ನ ಪ್ರತಿ.
8. ಕೋರಿರುವ ಸೌಲಭ್ಯದ ಬಗ್ಗೆ ಹೊಂದಿರುವ ತರಬೇತಿ ಅಥವಾ ಅನುಭವದ ಪತ್ರ.
9. ಬ್ಯಾಂಕ್ ಉಳಿತಾಯ ಖಾತೆಯ ಪ್ರತಿ.

**1. ಸ್ವಯಂ ಉದ್ಯೋಗ ಕಾರ್ಯಕ್ರಮ :-**

ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಬ್ಯಾಂಕ್ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದ ಅಡಿಯಲ್ಲಿನ ಯೋಜನೆಗಳ ಘಟಕ ವೆಚ್ಚ ಮತ್ತು ಸಹಾಯಧನದ ಮಿತಿ ಈ ಕೆಳಕಂಡಂತಿದೆ.

1.1 ಸ್ವಯಂ ಉದ್ಯೋಗ ಯೋಜನೆ. ರೂ.1.00 ಲಕ್ಷ ಮಿತಿಯೊಳಗೆ.

ಸಹಾಯಧನ – ಹೈನುಗಾರಿಕೆ ಉದ್ದೇಶ : ಘಟಕ ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.0.50 ಲಕ್ಷ (ಎರಡು ಸಿ.ಬಿ. ಹಸು/ಎಮ್ಮೆಗಳು)
ಇತರೆ ಉದ್ದೇಶ : ಘಟಕ ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.0.35 ಲಕ್ಷ

1.2 **ನೇರಸಾಲ** : ಘಟಕ ವೆಚ್ಚ ರೂ.0.40 ಲಕ್ಷ, ಇದರಲ್ಲಿ ಸಹಾಯಧನ ರೂ.0.25 ಲಕ್ಷ ಮತ್ತು ಸಾಲ ರೂ.0.15 ಲಕ್ಷ. (ಸಹಾಯಧನ ಮತ್ತು ಸಾಲ ನಿಗಮದಿಂದಲೇ ನೀಡಲಾಗುವುದು. ಸಾಲಕ್ಕೆ ಬಡ್ಡಿ ವಾರ್ಷಿಕ ಶೇ.4. ಮತ್ತು ಸಾಲ ಮರುಪಾವತಿ ಅವಧಿ 36 ತಿಂಗಳು.)

1.3 ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ ರೂ.1.00 ಲಕ್ಷ ಮೀರಿದ ಘಟಕಗಳು.

ಸಹಾಯಧನ – ವೃತ್ತಿ ಕೌಶಲ್ಯ ಉದ್ದೇಶ : ಘಟಕ ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.2.50 ಲಕ್ಷ
ಟೂರಿಸ್ಟ್ ಟ್ಯಾಕ್ಸಿ ಉದ್ದೇಶ : ಘಟಕ ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.3.00 ಲಕ್ಷ.
ಸಾರಿಗೆ ವಾಹನ ಇತರೆ ಉದ್ದೇಶ : ಘಟಕ ವೆಚ್ಚ : ರೂ 5 ಲಕ್ಷದ ವರೆಗೆ ಸಹಾಯಧನ: ಘಟಕ ವೆಚ್ಚದ ಶೇ.70 ರಷ್ಟು, ಗರಿಷ್ಠ ರೂ.3.50 ಲಕ್ಷ.
ಘಟಕ ವೆಚ್ಚ : ರೂ 5 ಲಕ್ಷ ಮೇಲ್ಪಟ್ಟು 10.00 ಲಕ್ಷದ ವರೆಗೆ ಸಹಾಯಧನ ˈಟಕ ವೆಚ್ಚದ ಶೇ.60 ರಷ್ಟು, ಗರಿಷ್ಠ ರೂ.5.00 ಲಕ್ಷ.
ಘಟಕ ವೆಚ್ಚ : ರೂ 10.00 ಲಕ್ಷ ದಿಂದ ಮೇಲ್ಪಟು 20.00 ಲಕ್ಷದ ವರೆಗೆ ಸಹಾಯಧನ ಘಟಕ ವೆಚ್ಚದ ಶೇ. 50 ರಷ್ಟು, ಗರಿಷ್ಠ ರೂ.5.00 ಲಕ್ಷ.

**<u>ಷರತ್ತುಗಳು</u>**

**1.** ಈ ಯೋಜನೆಯಡಿ ಸೌಲಭ್ಯ ಕಲ್ಪಿಸಲು ಅರ್ಜಿದಾರರಿಗೆ ನಿಗದಿಪಡಿಸಲಾಗಿರುವ ವಯೋಮಿತಿ ಈ ಕೆಳಕಂಡಂತಿರುತ್ತದೆ.

| | |
|---|---|
| ಕೃಷಿ ಮತ್ತು ಕೃಷಿ ಆಧಾರಿತ ಚಟುವಟಿಕೆಗಳು | 21 ರಿಂದ 60 ವರ್ಷಗಳು |
| ಕೃಷಿಯೇತರ ಚಟುವಟಿಕೆಗಳು | 21 ರಿಂದ 50ವರ್ಷಗಳು |

1.4 **ಭೂ ಒಡೆತನ ಯೋಜನೆ :**

ಘಟಕ ವೆಚ್ಚ ರೂ.15.00 ಲಕ್ಷದೊಳಗೆ ಎಷ್ಟು ವಿಸ್ತೀರ್ಣದ ತರಿ/ಖುಷ್ಕಿ/ಭಾಗಾಯ್ತು ಜಮೀನು ದೊರಕುವುದೋ ಅಷ್ಟು ಜಮೀನನ್ನು ಖರೀದಿಸಿ ಫಲಾಪೇಕ್ಷಿಗಳ ಹೆಸರಿಗೆ ನೊಂದಾಣಿ ಮಾಡಿಕೊಡಲಾಗುವುದು. ಘಟಕ ವೆಚ್ಚದಲ್ಲಿ ಶೇ.50 ರಷ್ಟು ಸಹಾಯಧನವಾಗಿದ್ದು, ಉಳಿದ ಭಾಗ

ಸಾಲವಾಗಿರುತ್ತದೆ. ಸಾಲದ ಹಣಕ್ಕೆ ಬಡ್ಡಿ ವಾರ್ಷಿಕ ಶೇ.6 ರಷ್ಟು ಇದ್ದು, ಸಾಲ ಮತ್ತು ಬಡ್ಡಿ ಹಣವನ್ನು ಫಲಾನುಭವಿಗಳು 10 ವರ್ಷಗಳಲ್ಲಿ ವಾರ್ಷಿಕ/ಅರೆವಾರ್ಷಿಕ ಕಂತುಗಳ ರೂಪದಲ್ಲಿ ಮಾಡಬೇಕಾಗಿರುತ್ತದೆ. ಈ ಯೋಜನೆಯಡಿ ಸೌಲಭ್ಯ ಬಯಸುವ ಫಲಾಪೇಕ್ಷಿಗಳ ವಯೋಮಿತಿ 18 ರಿಂದ 50 ವರ್ಷದೊಳಗಿರಬೇಕು.

**2. ಮೈಕ್ರೋ ಕ್ರೆಡಿಟ್ ಯೋಜನೆ :**

ಈ ಯೋಜನೆಯಡಿ ಸ್ವ ಸಹಾಯ ಗುಂಪುಗಳಲ್ಲಿ ಸದಸ್ಯರಾಗಿರುವ ಪರಿಶಿಷ್ಟ ಪಂಗಡದ ಮಹಿಳಾ ಫಲಾಪೇಕ್ಷಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಆರ್ಥಿಕ ನೆರವು ಒದಗಿಸಲಾಗುವುದು. ಘಟಕ ವೆಚ್ಚ ರೂ.15,000/- ಗಳಿದ್ದು, ಇದರಲ್ಲಿ ಸಹಾಯಧನ ರೂ.10,000/- ಮತ್ತು ರೂ.5,000/- ಸಾಲವಾಗಿರುತ್ತದೆ. ಸಾಲದ ಹಣಕ್ಕೆ ಬಡ್ಡಿ ವಾರ್ಷಿಕ ಶೇ.4ರಷ್ಟಿದ್ದು, ಸಾಲದ ಹಣವನ್ನು ಬಡ್ಡಿ ಸಮೇತವಾಗಿ 36 ಮಾಸಿಕ ಸಮಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕು.

**3. ಗಂಗಾ ಕಲ್ಯಾಣ ಯೋಜನೆ :**

ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರ ಖುಷ್ಕಿ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲು ನಿಗಮದಿಂದ **ವೈಯಕ್ತಿಕ ನೀರಾವರಿ ಕೊಳವೆಬಾವಿ, ತೆರೆದಬಾವಿ ಮತ್ತು** ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**3.1 ವೈಯಕ್ತಿಕ ನೀರಾವರಿ ಕೊಳವೆಬಾವಿ / ತೆರೆದ ಬಾವಿ ಯೋಜನೆ :**

ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿಸಣ್ಣ ರೈತರುಗಳು ಹೊಂದಿರುವ ಕನಿಷ್ಠ 1 ½ ಎಕರೆಯಿಂದ ಗರಿಷ್ಠ 5 ಎಕರೆಯವರೆಗಿನ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಕೊರೆದು/ತೆರೆದ ಬಾವಿ ನಿರ್ಮಿಸಿ, ಪಂಪು ಮೋಟರ್ ಅಳವಡಿಸಿ, ವಿದ್ಯುದ್ದೀಕರಣಗೊಳಿಸಿ ನೀರಾವರಿ ಸೌಲಭ್ಯವನ್ನು ಒದಗಿಸುವುದು ಈ ಯೋಜನೆ ಅನುಷ್ಠಾನದ ಉದ್ದೇಶವಾಗಿರುತ್ತದೆ. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಕನಿಷ್ಠ ಮಿತಿ 1.00 ಎಕರೆ ಇರುತ್ತದೆ.

ಈ ಯೋಜನೆಯಡಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಘಟಕ ವೆಚ್ಚವನ್ನು ರೂ.3.50 ಲಕ್ಷಗಳಿಗೆ ಹೆಚ್ಚಳ ಮಾಡಿರುತ್ತದೆ. (ಇದರಲ್ಲಿ ರೂ.3.00 ಲಕ್ಷ ಸಹಾಯಧನ ಮತ್ತು ಉಳಿದ ರೂ.0.50 ಲಕ್ಷ ಅವಧಿ ಸಾಲವಾಗಿರುತ್ತದೆ.). ಉಳಿದ ಜಿಲ್ಲೆಗಳಲ್ಲಿ ಘಟಕ ವೆಚ್ಚವು ರೂ.3.00 ಲಕ್ಷವಿದ್ದು, ಇದರಲ್ಲಿ ರೂ.2.50 ಲಕ್ಷ ಸಹಾಯಧನವಾಗಿರುತ್ತದೆ ಮತ್ತು ಉಳಿದ ರೂ.0.50 ಲಕ್ಷ ಸಾಲವಾಗಿರುತ್ತದೆ. ಸಾಲಕ್ಕೆ ಬಡ್ಡಿ ವಾರ್ಷಿಕ ಶೇ.6. ಫಲಾನುಭವಿಗಳು ಸಾಲದ ಹಣವನ್ನು ಬಡ್ಡಿ ಸಮೇತವಾಗಿ 12 ಅರೆ ವಾರ್ಷಿಕ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕು.

**3.2 ಏತ ನೀರಾವರಿ ಯೋಜನೆ :**

ಏತ ನೀರಾವರಿ ಯೋಜನೆಯಡಿ, ನೈಸರ್ಗಿಕವಾದ ನದಿ, ತೊರೆ, ಹಳ್ಳ, ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ಪಂಪ್ ಸೆಟ್ ಮತ್ತು ಪೈಪ್ ಲೈನ್ ಅಳವಡಿಸಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ ಘಟಕ ವೆಚ್ಚವು ಕನಿಷ್ಠ 8-00 ಎಕರೆ ಖುಷ್ಕಿ ಜಮೀನಿನ ಘಟಕಕ್ಕೆ ರೂ.4.00 ಲಕ್ಷ ಮತ್ತು 15-00 ಎಕರೆ ಜಮೀನಿನ ಘಟಕಕ್ಕೆ ರೂ.6.00 ಲಕ್ಷ ಇರುತ್ತದೆ.

**ಮೇಲ್ಕಂಡ ಯೋಜನೆಗಳಿಗೆ ಅರ್ಜಿಗಳನ್ನು ಫಲಾಪೇಕ್ಷಿಗಳು ನಿಗಮದ ವೆಬ್‌ಸೈಟ್ www.karnataka.gov.in/kmvstdcl ಪ್ರಕಟಣೆ ಮೆನುವಿನಲ್ಲಿ ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ್ದು, ಈಗಾಗಲೇ ಜಿಲ್ಲೆಗಳಿಗೆ ಕಳುಹಿಸಿರುವ ವಿವಿಧ ಯೋಜನೆಗಳ ಅರ್ಜಿಗಳನ್ನು ಫಲಾಪೇಕ್ಷಿಗಳಿಗೆ ಉಚಿತವಾಗಿ ವಿತರಿಸಿ, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ನಿಯಮಾನುಸಾರ ಜಿಲ್ಲಾ ಕಛೇರಿಯಲ್ಲಿ ದಿನಾಂಕ:31.05.2017ರೊಳಗೆ ಸ್ವೀಕರಿಸುವುದು. ಸ್ವೀಕರಿಸಿದ ಅರ್ಜಿಗಳ ಸಂಖ್ಯೆಗಳೊಂದಿಗೆ ಪ್ರತ್ಯೇಕವಾಗಿ ಯೋಜನೆವಾರು/ವಿಧಾನ ಸಭಾ ಕ್ಷೇತ್ರವಾರು ಮಾಹಿತಿಯನ್ನು ರಿಜಿಸ್ಟರ್‌ನಲ್ಲಿ ದಾಖಲಿಸುವುದು.**

**ನಿಗಮದ ಯೋಜನೆಗಳ ಅನುಷ್ಠಾನ ಕುರಿತಂತೆ, ಪರಿಶಿಷ್ಟ ಪಂಗಡದ ಜನಸಂಖ್ಯೆ ಆಧರಿಸಿ, ಜಿಲ್ಲಾವಾರು, ವಿಧಾನ ಸಭಾ ಕ್ಷೇತ್ರವಾರು, ಯೋಜನವಾರು ವಿವರಗಳನ್ನು ವಾರ್ಷಿಕ ಕ್ರಿಯಾ ಯೋಜನೆಯು ಅನುಮೋದನೆಯಾದ ಕೂಡಲೇ ಜಿಲ್ಲೆಗಳಿಗೆ ಕಳುಹಿಸಿಕೊಡಲಾಗುವುದು.**

**ಕೇಂದ್ರ ಕಛೇರಿಯಿಂದ ನೀಡಿರುವ ಸೂಚನೆಯಂತೆ ದಿನಾಂಕ:24.04.2017 ರಂದು ಜಿಲ್ಲಾ ಮಟ್ಟದ ಪ್ರಚಲಿತ ದಿನ ಪತ್ರಿಕೆಗಳಲ್ಲಿ ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ ಮೂಲಕ ಪ್ರಕಟಣೆ ನೀಡಲು ಈ ಮೂಲಕ ಸೂಚಿಸಿದೆ.**

ತಮ್ಮ ವಿಶ್ವಾಸಿ,

ಸಹಿ/-

(ಆರ್.ಎಸ್.ಪೆದ್ದಪ್ಪಯ್ಯ ಕೆ.ಎ.ಎಸ್)

ವ್ಯವಸ್ಥಾಪಕ ನಿರ್ದೇಶಕರು.